

# ಅಡಗೂಲಜ್ಜಿಯ ರೊಟ್ಟಿಗಳು!

ಬಹಳ ಹಿಂದೆ ಚೀನಾ ದೇಶದ ಒಂದು ಊರಿನಲ್ಲಿ ಒಬ್ಬ ವ್ಯಾಪಾರಿ ಇದ್ದ. ಅವನು ತನ್ನ ಕತ್ತೆಯ ಮೇಲೆ ಸರಕುಗಳನ್ನು ಹೇರಿಕೊಂಡು ಬೇರೆ ಬೇರೆ ಹಳ್ಳಿಗಳ ಕಡೆಗೆ ಹೋಗಿ ವ್ಯಾಪಾರ ಮಾಡುತ್ತಿದ್ದ. ದೂರದ ಸಂತೆಗಳಿಗೂ ಹೋಗಿ ವ್ಯಾಪಾರ ಮುಗಿಸಿಕೊಂಡು ಮನೆಗೆ ಬರುತ್ತಿದ್ದ.

ಒಮ್ಮೆ ಅವನು ಒಂದು ದೂರದ ಸಂತೆಗೆ ಹೋದ. ಅಲ್ಲಿ ಅವನಿಗೆ ಚೆನ್ನಾಗಿ ವ್ಯಾಪಾರವಾಯಿತು. ಅವನ ಸರಕುಗಳೆಲ್ಲ ಮಾರಾಟವಾಗಿ ಕೈ ತುಂಬ ಹಣ ಬಂತು. ವ್ಯಾಪಾರಿ ಬಹಳ ಸಂತೋಷದಿಂದ ತನ್ನ ಮನೆಯ ದಾರಿ ಹಿಡಿದು ಹೊರಟ. ದಾರಿ ತಪ್ಪಿ ಎಲ್ಲೆಲ್ಲೋ ಅಲೆದ. ಹಗಲು ಮುಗಿದು ಕತ್ತಲಾಯಿತು. ರಾತ್ರಿ ಅಲೆದು ಸುಸ್ತಾದ ವ್ಯಾಪಾರಿಗೆ ದೂರದಲ್ಲಿ ಒಂದು ಮಿಣುಕು ದೀಪದ ಬೆಳಕು ಕಾಣಿಸಿತು. ಅವನು ಅಲ್ಲಿಗೆ ಹೋದ.

ಅದೊಂದು ಅಡಗೂಲಜ್ಜಿಯ ಮನೆಯಾಗಿತ್ತು. ಅವಳು ದಾರಿ ತಪ್ಪಿ ಬಂದ ಯಾತ್ರಿಕರಿಗೆ ತಂಗಲು ಅವಕಾಶ ಮಾಡಿಕೊಡುತ್ತಿದ್ದಳು. ಅವಳು ವ್ಯಾಪಾರಿಯನ್ನು ಆದರದಿಂದ ಸ್ವಾಗತಿಸಿದಳು. ಅವನಿಗೆ ಗೋಧಿ ರೊಟ್ಟಿಯ ಊಟ ಹಾಕಿದಳು. ಬಡಿಸುವಾಗ ಅದೂ ಇದೂ ಮಾತನಾಡಿ ವ್ಯಾಪಾರಿಯ ಎಲ್ಲ ವಿಚಾರವನ್ನೂ ತಿಳಿದುಕೊಂಡಳು. ಅವನಿಗೆ ರಾತ್ರಿ ಮಲಗಲು ಪ್ರತ್ಯೇಕವಾದ ಕೋಣೆಯೊಂದನ್ನು ಕೊಟ್ಟಳು. ವ್ಯಾಪಾರಿ ತನ್ನ ಕೋಣೆಗೆ ಮಲಗಲು ಹೋದ. ಆ ವೇಳೆಗೆ ಇನ್ನಷ್ಟು ಯಾತ್ರಿಕರು ಅಜ್ಜಿಯ ಮನೆಗೆ ಬಂದರು. ಅಜ್ಜಿ ಅವರಿಗೂ ಊಟ ಬಡಿಸಿದಳು.

ವ್ಯಾಪಾರಿ ತನ್ನ ಕೋಣೆಯಲ್ಲಿ ಮಲಗಿದ. ಅವನಿಗೆ ರಾತ್ರಿ ಬಹಳ ಹೊತ್ತಾದರೂ ನಿದ್ದೆ ಬರಲಿಲ್ಲ. ಅತ್ತಿತ್ತ ಹೊರಳಾಡುತ್ತ ಅವನು ಸುಮ್ಮನೆ ಮಲಗಿದ್ದ. ಅವನ ಕೋಣೆಯ ಪಕ್ಕದಲ್ಲೇ ಅಡಗೂಲಜ್ಜಿಯ ಕೋಣೆಯು ಇತ್ತು. ನಡುರಾತ್ರಿ ಕಳೆದ ನಂತರ ಅಡಗೂಲಜ್ಜಿಯ ಕೋಣೆಯಲ್ಲಿ ಏನೋ ಭಾರವಾದ ವಸ್ತುವನ್ನು ಎಳೆದ ಶಬ್ದವಾಯಿತು. ವ್ಯಾಪಾರಿಯು ಕುತೂಹಲದಿಂದ ತನ್ನ ಕೋಣೆಯ ಕಿಟಕಿಯಿಂದ ಅಡಗೂಲಜ್ಜಿಯ ಕೋಣೆಯೊಳಗೆ ಇಣುಕಿ ನೋಡಿದ. ಅಲ್ಲಿ ಕಂಡ ದೃಶ್ಯ ಅವನಿಗೆ ತುಂಬ ಆಶ್ಚರ್ಯ ತಂದಿತು.

ಕೋಣೆಯ ಮಧ್ಯದಲ್ಲಿ ಅಡಗೂಲಜ್ಜಿ ಕೂತಿದ್ದಳು ಅವಳ ಪಕ್ಕದಲ್ಲಿ ಒಂದು ದೊಡ್ಡ ಪೆಟ್ಟಿಗೆ ಇತ್ತು. ಅಡಗೂಲಜ್ಜಿ ಆ ಪೆಟ್ಟಿಗೆ ಒಳಗಿಂದ ಎತ್ತಿನ ಗೊಂಬೆಗಳನ್ನು ತೆಗೆದು ಹೊರಗಡೆ ಇಟ್ಟಳು. ನಂತರ ಎರಡು ಮನುಷ್ಯ ಗೊಂಬೆಗಳನ್ನು ಪೆಟ್ಟಿಗೆಯಿಂದ ಹೊರತೆಗೆದಳು. ಅವುಗಳ ಕೈಗೆ ಪುಟ್ಟ ನೇಗಿಲೊಂದನ್ನು ಕೊಟ್ಟಳು. ನಂತರ ನೆಲದ ಮೇಲೆ ಸ್ವಲ್ಪ ನೀರು ಚಿಮುಕಿಸಿದಳು. ಗೊಣಗೊಣನೆ ಏನೇನೊ ಮಂತ್ರಗಳನ್ನು ಹೇಳಿದಳು.

ವ್ಯಾಪಾರಿಯು ನೋಡುತ್ತಿದ್ದಂತೆ ಆ ಮನುಷ್ಯ ಗೊಂಬೆಗಳು ನೀರು ಚಿಮುಕಿಸಿದ ಜಾಗದಲ್ಲಿ ಎತ್ತಿನ ಗೊಂಬೆಗಳಿಂದ ನೆಲವನ್ನು ಉತ್ತಿ ಹದ ಮಾಡಿದವು. ಅಡಗೂಲಜ್ಜಿಯು ಕೊಟ್ಟ ಗೋಧಿಯ ಕಾಳನ್ನು ಅಲ್ಲಿ ಬಿತ್ತನೆ ಮಾಡಿದವು. ಸ್ವಲ್ಪ ಹೊತ್ತಿನಲ್ಲೇ ಗೋಧಿಯ ಪೈರು ಬೆಳೆದು ಕಾಳುಗಟ್ಟಿತು. ನಂತರ ಆ ಗೊಂಬೆಗಳು ಗೋಧಿಯ ಪೈರನ್ನು ಕಟಾವು ಮಾಡಿ ಗೋಧಿಯನ್ನು ಸಂಗ್ರಹಿಸಿ ಒಂದು ಚೀಲಕ್ಕೆ ತುಂಬಿದವು. ನಂತರ ಅಡಗೂಲಜ್ಜಿಯು ಆ ಗೋಧಿಯನ್ನು ಸದ್ದಿಲ್ಲದೇ ಬೀಸಿ ಗೋಧಿಹಿಟ್ಟು ಮಾಡಿ ಅದನ್ನು ಒಂದು ಪಾತ್ರೆಯಲ್ಲಿ ಸಂಗ್ರಹಿಸಿ ಇಟ್ಟಳು. ನಂತರ ಗೊಂಬೆಗಳನ್ನೆಲ್ಲ ಪೆಟ್ಟಿಗೆಯಲ್ಲಿಟ್ಟು ಬದಿಗೆ ಸರಿಸಿ ಮಲಗಿಕೊಂಡಳು. ವ್ಯಾಪಾರಿಗೆ ತುಂಬ ಆಶ್ಚರ್ಯವಾಯಿತು. ಇದರಲ್ಲೇನೋ ಗುಟ್ಟಿದೆ ಎಂದು ಅವನಿಗೆ ಅನಿಸಿತು. ಅವನು ಅದನ್ನೇ ಯೋಚಿಸುತ್ತಾ ಮಲಗಿ ನಿದ್ದೆ ಮಾಡಿದ.

ಮರುದಿನ ಬೆಳಿಗ್ಗೆ ಅಡಗೂಲಜ್ಜಿಯು ಒಂದು ‘ನಾನು ಇಂದು ವಿಶೇಷವಾದ ಗೋಧಿಯ ರೊಟ್ಟಿಗಳನ್ನು ಮಾಡಿಕೊಡುತ್ತೇನೆ. ಅವು